# ನ.23ರಂದು ಎನ್‌ಐಟಿಕೆ ಘಟಿಕೋತ್ಸವ

•**ಮಂಗಳೂರು:** ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ)ಯ 22ನೇ ವಾರ್ಷಿಕ ಘಟಿಕೋತ್ಸವ ನ.23ರಂದು ಸುರತ್ಕಲ್ ಎನ್‌ಐಟಿಕೆ ಸಿಲ್ವರ್ ಜುಬಿಲಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಘಟಿಕೋತ್ಸವ ಸಮಾರಂಭ ಎರಡು ಭಾಗಗಳಲ್ಲಿ ನಡೆಯಲಿದ್ದು ಸ್ನಾತಕೋತ್ತರ (ಪಿಜಿ) ಮತ್ತು ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಮತ್ತು ಪದವಿ (ಯುಜಿ) ವಿದ್ಯಾರ್ಥಿಗಳಿಗೆ ಮಧ್ಯಾಹ್ನ 3 ರಿಂದ ನಡೆಯಲಿದೆ. ಸ್ನಾತಕೋತ್ತರ ಘಟಿಕೋತ್ಸವದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಿಕಂದರಾಬಾದ್‌ನ ಕಿಮ್ಸ್ ಫೌಂಡೇಶನ್ ಮತ್ತು ರಿಸರ್ಚ್ ಸೆಂಟರ್ (ಕೆಎಫ್‌ಆರ್‌ಸಿ)ಅಧ್ಯಕ್ಷ ಮತ್ತು ಡಿಆರ್‌ಡಿಒದ ನೌಕಾ ವ್ಯವಸ್ಥೆ ಮತ್ತು ಸಾಮಗ್ರಿಗಳ ಮಾಜಿ ಮಹಾನಿರ್ದೇಶಕ ಡಾ.ಭುಜಂಗ ರಾವ್ ವೆಪಕೊಮ್ಮ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಎನ್‌ಐಟಿಕೆಯ ನಿರ್ದೇಶಕ ಪ್ರೊ.ಬಿ.ರವಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಯುಜಿ ಘಟಿಕೋತ್ಸವದಲ್ಲಿ ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್.ಕಿರಣ್ ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು ಜೋಧಪುರದ ಇಂಡಿಯನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ನಿರ್ದೇಶಕ ಪ್ರೊ.ಅವಿನಾಶ್ ಕುಮಾರ್ ಅಗರ್ವಾಲ್ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಎನ್‌ಐಟಿಕೆಯ ಪ್ರೊ. ಅರುಣ್ ಇಸ್ಲೂರು, ಪ್ರೊ. ಸೈದಕ್ ದತ್ತ, ಪಿಆರ್‌ಒ ವೈಷ್ಣವಿ ಉಪಸ್ಥಿತರಿದ್ದರು.

## 2078 ಮಂದಿ ವಿದ್ಯಾರ್ಥಿಗಳಿಗೆ ಪದವಿ

**ಈ ವರ್ಷ ಎನ್‌ಐಟಿಕೆಯ 22ನೇ ವಾರ್ಷಿಕ ಘಟಿಕೋತ್ಸವದಲ್ಲಿ ಒಟ್ಟು 2078 ವಿದ್ಯಾರ್ಥಿಗಳು ಪದವಿ ಸ್ವೀಕರಿಸಲಿದ್ದಾರೆ. ಇದರಲ್ಲಿ 1002 ಬಿ.ಟೆಕ್ ಪದವಿಗಳು, 758 ಎಂ.ಟೆಕ್ ಮತ್ತು ಎಂ.ಟೆಕ್ (ಆರ್), 179 ಇತರ ಪಿಜಿ ವಿದ್ಯಾರ್ಥಿಗಳು, 139 ಪಿಎಚ್‌ಡಿ ವಿದ್ಯಾರ್ಥಿಗಳು, 195 ಬಿ.ಟೆಕ್ ಪದವಿಗಳು ಮತ್ತು 5 ಬಿ.ಟೆಕ್ (ಆನರ್ಸ್) ಪದವಿಗಳು ಸೇರಿವೆ. 9ಬಿ.ಟೆಕ್ ವಿದ್ಯಾರ್ಥಿಗಳು ಮತ್ತು 31 ಸ್ನಾತಕೋತ್ತರ ವಿದ್ಯಾರ್ಥಿಗಳು ಅತ್ಯುನ್ನತ ಸಿಜಿಪಿಎ ಪಡೆಯಲು ನಾನಾ ಏಜೆನ್ಸಿಗಳು ಪ್ರಾಯೋಜಿಸಿದ ಸಂಸ್ಥೆಯ ಚಿನ್ನದ ಪದಕಗಳು ಮತ್ತು ಪದಕಗಳನ್ನು ಪಡೆಯಲಿದ್ದಾರೆ ಎಂದು ಪ್ರೊ.ಬಿ.ರವಿ ತಿಳಿಸಿದರು.**

Hosa Digantha, Date:21/11/24, p, no - 05